ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 28/2011
ಪಿ.ಡಬ್ಲ್ಯೂ : 1

ದಿನಾಂಕ: 23-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ಎಸ್.ಕೆ.ಎಸ್. ವಕೀಲರಿಂದ

8. ದಿನಾಂಕ 21-11-2006 ರ ಕ್ರಯ ದಸ್ತಾವೇಜಿನ ಪ್ರಕಾರ ನಾನು 29 ಸೆಂಟ್ಸ್ ಹಾಗೂ ಇನ್ನೊಂದು 49 ಸೆಂಟ್ಸ್ ಜಾಗವನ್ನು ಸಚ್ಚಿದಾನಂದ ಹೆಗ್ಡೆಯವರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಆ ದಸ್ತಾವೇಜಿನ ನೊಂದಾಯಿತು ದೃಢಿಕೃತ ನಕಲನ್ನು ಸಚ್ಚಿದಾನಂದ ಶೆಟ್ಟಿಯವರು ನಿ.ಪಿ.14 ರಂತೆ ಅಸಲು ದಾವಾ ಸಂಖ್ಯೆ 188/2010 ರಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ಸದರಿ ದಸ್ತಾವೇಜಿನ ಮೂಲ ಪ್ರತಿ ನನ್ನ ಬಳಿ ಇರುತ್ತದೆ. ಆ ಮೂಲ ದಸ್ತಾವೇಜಿನ ಒಟ್ಟಿಗೆ ಸದರಿ ಮಾರಾಟ ಮಾಡಿದ ಸ್ಥಳಗಳ ನಕ್ಷೆಯನ್ನು ಸಹ ಅದರ ಜೊತೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಕ್ಷೆಯನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮೂಲ ದಸ್ತಾವೇಜನ್ನು ನಾನು ಹಾಜರು ಪಡಿಸಿದರೆ ನಕ್ಷೆ ಕೊಟ್ಟ ಬಗ್ಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಅದನ್ನು ನನಗೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

9. ಆ ಮೂಲ ದಸ್ತಾವೇಜಿನಲ್ಲಿ ನಕ್ಷೆ ಇರುವುದು ಗೊತ್ತಾಗುತ್ತದೆ ಎಂದು ನಾನು ಆ ಮೂಲ ದಸ್ತಾವೇಜನ್ನು ಹಾಜರು ಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 23-01-2004 ರ ಕ್ರಯ ದಸ್ತಾವೇಜಿನ ಮೇರೆಗೆ ಸಚ್ಚಿದಾನಂದ ಹೆಗ್ಡೆಯವರು ರತ್ನಾಕರ ಶೆಟ್ಟಿಯವರಿಗೆ 1 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ದಿನಾಂಕ 23-01-2004 ರ ಕ್ರಯ ದಸ್ತಾವೇಜನ ದೃಢಿಕೃತ ಪತ್ರವನ್ನು ತೋರಿಸಿದ್ದು, ಸಾಕ್ಷಿ ಹೌದು ಎಂದು ಒಪ್ಪಿ ಕೊಂಡಿದ್ದು, ಸದರಿ ದಾಖಲೆ ಈಗಾಗಲೇ ನಿ.ಪಿ.11 ಎಂದು ಅಸಲು ದಾವಾ ಸಂಖ್ಯೆ 188/2010 ರಲ್ಲಿ ಹಾಜರು ಪಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

10. ನಿ.ಪಿ.11 ರ ದಾಖಲೆಯಂತೆ ಆಸ್ತಿ ಸಂಖ್ಯೆ 251/ 1 ಎ 2 ಅಂತ ಗುರುತಿಸಿದ ಸ್ಥಳವನ್ನು ಕೊಡಲಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯ ನಕಾಶೆಯಲ್ಲಿ ತೋರಿಸಿದ 251/ 1 ಎ 3 29 ಸೆಂಟ್ಸ್ ಸ್ಥಳ ನಾನು ಖರೀದಿಸಿ ದ ಜಾಗ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ನಕ್ಷೆಯಲ್ಲಿ ನಾನು ಖರೀದಿಸಿದ

ಸ್ಥಳ ಕಂಡು ಬರುವುದಿಲ್ಲ ಎಂದು ನುಡಿಯುತ್ತಾರೆ. ರತ್ನಾಕರ ಶೆಟ್ಟಿಯವರು ಖರೀದಿಸಿದ ಕ್ರಯದ ಜಾಗವನ್ನು ನಾನು ನೋಡಿರುತ್ತೇನೆ. ಸಾಕ್ಷಿ ಅದರಲ್ಲಿ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸಚ್ಚಿದಾನಂದ ಹೆಗ್ಡೆಯವರು ಮಾರಾಟ ಮಾಡಿದ 2 ಕ್ರಯ ಪತ್ರದಲ್ಲಿ ಹಾಗೂ ರಾಮಕೃಷ್ಣ ಭಂಡಾರ್ಕಾರ್ ರವರು ಕ್ರಯ ಮಾಡಿದ ಒಂದು ಕ್ರಯ ಪತ್ರದಲ್ಲಿ ನಿ.ಪಿ. 11 ರ ಜೊತೆ ಹಾಜರು ಪಡಿಸಿದ ನಕ್ಷೆಯಲ್ಲಿ ಕಾಣುವ ಸರ್ವೆ ನಂಬರ್ 251/ 1 ಎ 1 ನ್ನು ಮಾರಾಟ ಮಾಡಿರುವುದು ಕಂಡು ಬರುವುದಿಲ್ಲ ಎಂದರೆ ಅದು ಸರಿಯಲ್ಲ ಎಂದು ನುಡಿಯುತ್ತಾರೆ.

11. ನಮ್ಮ ದಸ್ತಾವೇಜಿನ ಕ್ರಯ ಪತ್ರಗಳನ್ನು ಹಾಜರು ಪಡಿಸಿದರೆ ಸರಿಯಾದ ಸಂಗತಿಗಳು ಹೊರಬರುತ್ತದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನ್ಯಾಯಲಯದ ಗಮನಕ್ಕೆ ಬರಬಾರದು ಎಂಬ ಕಾರಣಕ್ಕೆ ಅವುಗಳನ್ನು ಹಾಜರು ಪಡಿಸುತ್ತಿಲ್ಲ ಎಂದರೆ ಸರಿಯಲ್ಲ.ನಿ.ಪಿ. 11 (OS No.188/10 ರಲ್ಲಿ ಹಾಜರು ಪಡಿಸಿದ) ರಲ್ಲಿ ಕಾಣಿಸಿದ ಸರ್ವೆ ನಂಬರ್ 251/1 ಎ 1 ಎಂದು ಕಾಣಿಸಿದ ಸ್ಥಳದ ವಿಸ್ತೀರ್ಣ 1 ಎಕರೆ 80 ಸೆಂಟ್ಸ್ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. OS 188/2010 ರಲ್ಲಿ ವ್ಯಾಜ್ಯವಿರುವ ಸ್ಥಳದ ವಿಸ್ತೀರ್ಣ 1 ಎಕರೆ 80 ಸೆಂಟ್ಸ್ ಎಂದರೆ ಸರಿಯಲ್ಲ. ನಾನು ಆ ವ್ಯಾಜ್ಯದ ವಾದ ಪತ್ರವನ್ನು ನೋಡಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಲಿಖಿತ ತಕರಾರು ಸಲ್ಲಿಸಿರುತ್ತೇನೆ.ಲಿಖಿತ ಹೇಳಿಕೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ಪತ್ರದಲ್ಲಿ ವಾದ ಪತ್ರದಲ್ಲಿರುವ ವಿಚಾರಗಳನ್ನು ಹೇಳಿ ನನ್ನ ಅಭಿಪ್ರಾಯ ಕೇಳಿ ಆ ನಂತರ ಲಿಖಿತ ಹೇಳಿಕೆಯನ್ನು ನ್ಯಾಯಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ.

12. OS No.188/10 ರಲ್ಲಿ ಯಾವ ದಾವಾ ಪತ್ರಕ್ಕೆ ಲಿಖಿತ ಹೇಳಿಕೆಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿ ಸಚ್ಚಿ ದಾನಂದ ಶೆಟ್ಟಿಯವರು ಸಲ್ಲಿಸಿದ ವಾದ ಪತ್ರಕ್ಕೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. OS No.188/10 ರಲ್ಲಿ ಕಮಿಷನರ್ ರವರ ನೇಮಕ ಆಗಿರುತ್ತದೆ ಎಂದರೆ ಸರಿ. ಕಮಿಷನರ್ ರವರು ಸ್ಥಳದ ಸಂದರ್ಶನ ಮಾಡಿ ಅವರ ವರದಿಯನ್ನು ನಕ್ಷೆಯನ್ನು ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಕಮಿಷನರ್ ರವರು ವರದಿಯೊಂದಿಗೆ ಹಾಜರು ಪಡಿಸಿದ ನಕ್ಷೆಯಂತ ತೋರಿಸಿದ್ದು, ಸಾಕ್ಷಿ ಹೌದು ಎಂದು ಹೇಳಿದ್ದರಿಂದ ಅದನ್ನು ನಿ.ಸಿ. **1** ಎಂದು ಗುರುತಿಸಲಾಯಿತು. ನಿ.ಸಿ. 1 ರಲ್ಲಿ ತೋರಿಸಿರುವ 534/6 ರ ಜಾಗ ಅಸಲು ದಾವಾ ಸಂಖ್ಯೆ 188/10 ರ ವಿವಾದಿತ ಸ್ಥಳ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಕಮಿಷನರ್ ರವರು ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದೆ ಎಂದರೆ ಸರಿ. ಆ ಸಮಯದಲ್ಲಿ 534/6 ರ ಜಾಗವನ್ನು ನಾನು ನನ್ನ ಸ್ಥಳ ಎಂದು

ಹೇಳಿರುತ್ತೇನೆ. ಸಚ್ಚಿದಾನಂದ ಶೆಟ್ಟಿಯವರು ಅದೇ ಸ್ಥಳವನ್ನು ನನ್ನ ಜಾಗ ಎಂದು ಹೇಳಿರುತ್ತಾರೆ ಎಂದರೆ ಸರಿ.

13. ನಿ.ಸಿ. 1 ರ 534/6 ನನ್ನ ಜಾಗ ಎಂದು ತೋರಿಸಲು ಯಾವುದೇ ದಾಖಲೆ ಪತ್ರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಕೊಟ್ಟ ವಿಸ್ತೀರ್ಣವೇ ದಾಖಲೆ ಎಂದು ನುಡಿಯುತ್ತಾರೆ. ಸಾಕ್ಷಿ ಸಚ್ಚಿದಾನಂದ ಹೆಗ್ಡೆಯವರು ಕೊಟ್ಟ ದಾಖಲೆಯಲ್ಲಿ ಹೆಚ್ಚು ವಿಸ್ತೀರ್ಣವನ್ನು ತೋರಿಸಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಎರಡು ಕ್ರಯ ಪತ್ರದಲ್ಲಿ ಹೆಚ್ಚು ವಿಸ್ತೀರ್ಣ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಹೆಚ್ಚು ವಿಸ್ತೀರ್ಣ ತೋರಿಸಿ ಕಡಿಮೆ ಕೊಟ್ಟಿರುವುದರಿಂದ ನನಗೆ ಕೊಟ್ಟಿರುವ ವಿಸ್ತೀರ್ಣದ ಜಾಗ ಬೇಕು ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನಗೆ ಕ್ರಯಕ್ಕೆ ಕೊಟ್ಟಂತಹ ದಾಸ್ತವೇಜಿನಲ್ಲಿ ತೋರಿಸಿದ ವಿಸ್ತೀರ್ಣ ಹಾಗೂ ಸದರಿ ಕ್ರಯ ಪತ್ರಗಳಡಿಯಲ್ಲಿ ಸ್ವಾದೀನಕ್ಕೆ ಕೊಟ್ಟಂತಹ ವಿಸ್ತೀರ್ಣ ಎರಡು ಸಮಾನಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಕ್ರಯ ಕೊಟ್ಟ ಸ್ಥಳದಲ್ಲಿ ಕ್ರಯದ ಜಾಗದ ಗಡಿಯನ್ನು ತೋರಿಸುವ ಸಲುವಾಗಿ ನಕ್ಷೆಯನ್ನು ಇಟ್ಟಿದ್ದರು ಎಂದರೆ ಸರಿಯಲ್ಲ.

14. ಆ ನಕ್ಷೆಯನ್ನು ನಾನು ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ಆ ನಂತರ ಸ್ವಾಧಿನಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 29-10-2011 ರ ಕಮಿಷನರ್ ರವರ ವರದಿ ಜೊತೆಗೆ ಕೊಟ್ಟಂತಹ ನಕ್ಷೆಯ ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಆ ನಕ್ಷೆ ಗೊತ್ತಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಸಿ. **2** ಎಂದು ಗುರುತಿಸಲಾಯಿತು. ನಿ.ಸಿ. 2 ರಲ್ಲಿ 251 / ಎ ಅಂತ ತೋರಿಸಿದ ಸ್ಥಳ ವಿವಾದಿತ ಸ್ಥಳ ಎಂದರೆ ಸಾಕ್ಷಿ ದಾಖಲೆ ನೋಡಿ ಸರಿಯಲ್ಲ ಎಂದು ನುಡಿಯುತ್ತಾರೆ. ನಿ.ಸಿ. 2 ರಲ್ಲಿ ನಮ್ಮ ಸ್ಥಳ ಹಾಗೂ ಸಚ್ಚಿದಾನಂದ ಹೆಗ್ಡೆಯವರ ಜಾಗ ಒಳಗೊಂಡಿರುತ್ತದೆ. ಪ್ರತ್ಯೇಕವಾಗಿ ವಿವಾದ ಸ್ಥಳ ಯಾವುದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. OS 188/10 ರ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಿವಾದಿತ ಸ್ಥಳದಲ್ಲಿ ಅಕೇಶೀಯಾ ಗಿಡ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಮರಗಳನ್ನು ಪರವಾನಿಗೆ ಪಡೆಯದೇ ಕಡಿದಿರುತ್ತೇನೆ ಎಂದರೆ ಸರಿಯಲ್ಲ. ಪರವಾನಿಗೆಗೆ ಪತ್ರ ಬರೆದಿರುತ್ತೇನೆ. ನನ್ನ ಬಳಿ ಪರವಾನಿಗೆ ಇತ್ತು ಎಂದು ನುಡಿಯುತ್ತಾರೆ. ಪರವಾನಿಗೆ ಪತ್ರ ವಕೀಲರಿಗೆ ತೋರಿಸಿರುತ್ತೇನೆ. ಪರವಾನಿಗೆ ಪತ್ರ ಹಾಜರು ಪಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

15. ಕಮಿಷನರ್ ರವರು ಸ್ಥಳಕ್ಕೆ ಬಂದಾಗ ನಾನು ಕಡಿದ ಮರಗಳು ಸ್ಥಳದಲ್ಲಿ ಇದ್ದವು ಎಂದರೆ ಸರಿ. ಕಡಿದ ಮರಗಳನ್ನು ನ್ಯಾಯಲಯದ ಆದೇಶದ ಮೇರೆಗೆ ನನ್ನ ಹಾಗೂ ಸಚ್ಚಿದಾನಂದ ಶೆಟ್ಟಿಯವರ ಮಧ್ಯೆ ಏಲಂ ಆಗಿರುತ್ತದೆ ಎಂದರೆ ಸರಿ. ಏಲಂ ಮಾಡಿ ಬಂದಂತಹ ಹಣವನ್ನು ರಿಸಿವರ್ ನ್ನು ನ್ಯಾಯಲಯಕ್ಕೆ ಕಟ್ಟಿರುತ್ತಾರೆ ಎಂದರೆ ಸರಿ. ಮರ ಇದ್ದ ಸ್ಥಳ ಹೊರತು ಪಡಿಸಿ ನನ್ನ ಕ್ರಯ ಪತ್ರದಲ್ಲಿ ಒಳಗೊಂಡ ಸ್ಥಳದಲ್ಲಾಗಲಿ, ರತ್ನಾಕರ ಶಟ್ಟಿಯವರ ಸ್ಥಳದಲ್ಲಾಗಲಿ ಇನ್ನುಳಿದ 2 ದರ್ಕಾಸ್ತುದಾರರ ಸ್ಥಳದಲ್ಲಾಗಲಿ ಅಕೇಶೀಯಾ ಮರ ಇರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಸ್ಥಳಗಳಲ್ಲಿಯು ಸಹ ಅಕೆಶಿಯಾ ಮರಗಳು ಇದ್ದವು ಎಂದು ನುಡಿಯುತ್ತಾರೆ.

16. ಉಳಿದ ಸ್ಥಳಗಳಲ್ಲಿ ಮರಗಳು ಇದ್ದ ಬಗ್ಗೆ ಕಮಿಷನರ್ ಬಂದಾಗ ನಾನು ತೋರಿಸಿರುವುದಿಲ್ಲ. ಮರ ಕಡಿದ ಹಣವನ್ನು ಪಡೆದುಕೊಳ್ಳಲು OS 188/2010 ರ ವಾದಿ ಸಚ್ಚಿ ದಾನಂದ ಹೆಗ್ಡೆಯವರು ಅರ್ಹರು ಎಂದರೆ ಸರಿಯಲ್ಲ. ವಿನಾ ಕಾರಣ ದುಸ್ಸಾಧನೆ ಮಾಡುವ ಉದ್ದೇಶದಿಂದ ಸಚ್ಚಿದಾನಂದ ಹೆಗ್ಡೆಯವರು ಸಲ್ಲಿಸಿದ ದಾವಕ್ಕೆ ಪ್ರತಿಯಾಗಿ ನಾನು ಅಸಲು ದಾವಾ ಸಂಖ್ಯೆ 28/11 ರಂತೆ ಅವರ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಸದರಿ ವಿವಾದಿತ ಸ್ಥಳ ದ ಅಂಶ ಭೂ ಸ್ವಾಧೀನವಾಗಿ ಹಣವನ್ನು ಭೂ ಸ್ವಾಧಿನಾಧಿಕಾರಿಗಳ ಬಳಿ ಡೆಪಾಸಿಟ್ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಆಗುವ ಹಂತದಲ್ಲಿದೆ ಎಂದು ನುಡಿಯುತ್ತಾರೆ. ಈ ವ್ಯಾಜ್ಯವನ್ನು ಮುಚ್ಚಿಟ್ಟು ನಾನು ಹಣವನ್ನು ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಚ್ಚಿ ದಾನಂದ ಹೆಗ್ಡೆಯವರು ಆ ವಿಚಾರ ತಿಳಿದು ಆಕ್ಷೇಪಣೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ